ಅರಣ್ಯ ಇಲಾಖೆಯಂ 'ಸಿ' ಮತ್ತು 'ಡಿ' ವರ್ಗದ ಜಮೀನಿನ ಬಗ್ಗೆ

೫೯೮ (ಡಿ)ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಅರಣ್ಯ, ಗಣಿ ಮಂತ್ತು ಭೂವಿಜ್ಞಾನ ಮಂತ್ರಿಗಳಂ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅರಣ್ಯ ಇಲಾಖೆಯವರಂ ಹೊಂದಿರುವ 'ಸಿ' ಮತ್ತು 'ಡಿ' ವರ್ಗದ ಜಮೀನಿನ ವಿಸ್ತೀರ್ಣವೆಷ್ಟು?

ಆ) ರೈತರು ತಮಗೇ ಮಂಜೂರು ಮಾಡಬೇಕೆಂದು ಕೋರಿ ತಮ್ಮ ಅಕ್ರಮ ಅನುಭವದಲ್ಲಿದ್ದ ಜಮೀನಿಗೆ ದರಖಾಸ್ತು ಅರ್ಜಿಯನ್ನು ಸಲ್ಲಿಸಿದಾಗ ಸದರಿ ಜಮೀನನ್ನು 'ಸಿ' ಮತ್ತು 'ಡಿ' ವರ್ಗದ ಜಮೀನೆಂದು ಇಲಾಖೆಯಂ ಅಕ್ರಮಿಸಿಕೊಂಡ ಜಮೀನಿನ ವಿಸ್ತೀರ್ಣವೆಷ್ಟು?

ಶ್ರೀ ಜೆ. ಎಸ್. ದೇಶ್‌ಮುಖ್ (ಅರಣ್ಯ, ಗಣಿ ಮತ್ತು ಭೂವಿಜ್ಞಾನ ಮಂತ್ರಿಗಳು).—

ಅ) ಸರ್ಕಾರಿ ಆದೇಶ ಪ್ರಕಾರ ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಗೆ ವರ್ಗಾಯಿಸಿದ ಜಮೀನಿನಲ್ಲಿ ಪ್ರಸ್ತುತ ಅರಣ್ಯ ಇಲಾಖೆಯು ಪಡೆದುಕೊಂಡ ಜಮೀನಿನ ಒಟ್ಟು ವಿಸ್ತೀರ್ಣವು ೫,೫೪,೮೫೩ ಹೆಕ್ಟೇರ್ ಆಗಿರುತ್ತದೆ.

ಆ) ಇಂತಹ ಪ್ರಕರಣಗಳಾವು ಇಲ್ಲ.

ಸಭೆಯಂ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನೆ ಹಾಗೂ ಕಾರ್ಮಿಕ ಮಂತ್ರಿ) ಈ ಕೆಳಗಿನ ಕಾಗದ ಪ್ರತಿಗಳನ್ನು ಸಭೆಯು ಮುಂದಿಡಬಯಸುತ್ತೇವೆ.—

೧೯೬೪ನೇ ಇಸವಿಯ ಕರ್ನಾಟಕ ಭೂಕಂದಾಯ ಶಾಸನದ ೧೯೪ (೩)ರ ಕಲಮಿನ ಮೇರೆಗೆ.—

ಅ) ಮಂಡ್ಯ ತಾಲ್ಲೂಕಿನ ೭೭ ಗ್ರಾಮಗಳಿಗೆ ೧೯೮೪-೮೫ನೇ ಸಾಲಿನಲ್ಲಿ ಭೂಕಂದಾಯವನ್ನು ಮನ್ನಾ ಮಾಡುವುದಕ್ಕೆ ಸಂಬಂಧಿಸಿದಂತೆ ದಿನಾಂಕ ೨೧-೨-೧೯೮೭ರಂದು ಹೊರಡಿಸಲಾದ ಆರ್‌ಡಿ ೭೯ ಟಿಆರ್‌ಎಂ ೮೪ನೇ ಕ್ರಮಾಂಕದ ಅಧಿಸೂಚನೆಯನ್ನು

ಆ) ಲಿಂಗಸೂರು ತಾಲ್ಲೂಕಿನ ೪೯ ಗ್ರಾಮಗಳಿಗೆ ೧೯೮೬-೮೭ನೇ ಸಾಲಿನಲ್ಲಿ ಭೂಕಂದಾಯವನ್ನು ಮನ್ನಾ ಮಾಡುವುದಕ್ಕೆ ಸಂಬಂಧಿಸಿದಂತೆ ದಿನಾಂಕ. ೧೬-೨-೧೯೮೭ರಂದು ಹೊರಡಿಸಲಾದ ಆರ್‌ಡಿ ೧ ಟಿಆರ್‌ಎಂ ೮೭ನೇ ಕ್ರಮಾಂಕದ ಅಧಿಸೂಚನೆಯನ್ನು ಹಾಗೂ

ಇ) ಕುಂದಗೋಳ ತಾಲ್ಲೂಕಿನಲ್ಲಿರುವ ೨ ಗ್ರಾಮಗಳಿಗೆ ೧೯೮೧-೮೨ನೇ ಸಾಲಿನಲ್ಲಿ ಭೂಕಂದಾಯವನ್ನು ಮನ್ನಾ ಮಾಡುವುದಕ್ಕೆ ಸಂಬಂಧಿಸಿದಂತೆ ದಿನಾಂಕ. ೧೬-೨-೧೯೮೭ರಂದು ಹೊರಡಿಸಲಾದ ಆರ್‌ಡಿ ೪೨ ಟಿಆರ್‌ಎಂ ೮೫ನೇ ಕ್ರಮಾಂಕದ ಅಧಿಸೂಚನೆಯನ್ನು ಸಭೆಯಂ ಮುಂದಿಡುತ್ತೇನೆ

೨) ಶ್ರೀ ಕೆ ಎಂ. ಕೃಷ್ಣಾರೆಡ್ಡಿ (ರೇಷ್ಮೆ, ಪಶುಸಂಗೋಪನೆ ಮತ್ತು ಮತ್ಸ್ಯೋದ್ಯಮ ಮಂತ್ರಿ)

ಸ್ವಾಮಿ ೧೯೫೬ನೇ ಇಸವಿಯ ಕಂಪನಿಗಳ ಶಾಸನದ ೬೧೯ (ಎ)ನೇ ಕಲಮಿನ ಮೇರೆಗೆ ಕರ್ನಾಟಕ ಕಂರಿ ಮತ್ತು ಕುರಿ ಉತ್ಪನ್ನಗಳ ಅಭಿವೃದ್ಧಿ ಮಂಡಳಿಯ ೧೯೮೫-೮೬ರ ವಾರ್ಷಿಕ ವರದಿಯಂನ್ನು ಸಭೆಯಮಂಂದಿಡುತ್ತೇನೆ.

ಅಧ್ಯಕ್ಷರು. ಕಾಗದ ಪತ್ರಗಳನ್ನು ಸಭೆಯು ಮಂಂದಿಡಲಾಯಿತಂ.

ಅರ್ಜಿಗಳನ್ನು ಒಪ್ಪಿಸುವುದಂ

ಶ್ರೀ ಜಿ. ಎಸ್ ಶಿವನಂಜಪ್ಪ.—ಮಾನ್ಯ ಅಧ್ಯಕ್ಷರೆ, ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕಿನ ಇಡಗೂರು ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಘಟಕವನ್ನು ತೆರೆಯುವ ಬಗ್ಗೆ ಅರ್ಜಿಯನ್ನು ಸದನದ ಮುಂದೆ ಒಪ್ಪಿಸುತ್ತೇನೆ

ಅಧ್ಯಕ್ಷರ ಆರ್ಜಿಯನ್ನು ಒಪ್ಪಿಸಲಾಗಿದೆ.

ಶ್ರೀ ಕೆ. ಕುಶಾಲ್ —ಮಾನ್ಯ ಅಧ್ಯಕ್ಷರೆ,ದಕ್ಷಿಣ ಕನ್ನಡ ಜಿಲ್ಲೆ ಸುಳ್ಯ ತಾಲ್ಲೂಕು ಕೇಂದ್ರಕ್ಕೆ ಬಸ್ಸು ಸೌಲಭ್ಯವನ್ನು ಹೆಚ್ಚಿಸುವ ಬಗ್ಗೆ ಆರ್ಜಿಯನ್ನು ಸದನದ ಮುಂದೆ ಒಪ್ಪಿಸುತ್ತೇನೆ.

ಅಧ್ಯಕ್ಷರು.—ಆರ್ಜಿಯನ್ನು ಒಪ್ಪಿಸಲಾಗಿದೆ

ಗಮನ ಸೆಳೆಯುವ ಸೂಚನೆ

1 ಹುಬ್ಬಳ್ಳಿಯ ಆನಂದನಗರದ ಬಳಿ 300 ಗುಡಿಸಲುಗಳನ್ನು ತೆಗೆದುಹಾಕಿರುವುದು

ಶ್ರೀ ಎ ಎಂ. ಹಿಂಡಸಗೇರಿ.—ಮಾನ್ಯ ಅಧ್ಯಕ್ಷರೆ, ಹುಬ್ಬಳ್ಳಿಯ ಆನಂದ್‌ನಗರದ ಹತ್ತಿರ ಮೂರು ನೂರು ಗುಡಿಸಲುಗಳನ್ನು ತೆಗೆದುಹಾಕಿರುವ ಬಗ್ಗೆ ಕಾನೂನು, ಸಂಸದೀಯ ವ್ಯವಹಾರಗಳು, ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ನಗರಾಭಿವೃದ್ಧಿ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಆಹಾರ ಮತ್ತು ಅರಣ್ಯ ಹಾಗೂ ನಗರಾಭಿವೃದ್ಧಿ ಮಂತ್ರಿ).—

ಹುಬ್ಬಳ್ಳಿ-ಧಾರವಾಡ ಮಹಾನಗರಸಭೆಯ ವ್ಯಾಪ್ತಿಯಲ್ಲಿರುವ ಕೃಷ್ಣಾಪುರದ ಸರ್ವೆ ನಂ. ೩೦/೧ ರಲ್ಲಿರುವ ೩ ಎಕರೆ ೨೮ ಗುಂಟೆ ಜಮೀನು ಹಾಗೂ ಆನಂದನಗರದ ಸರ್ವೆ ನಂ ೩೧ರಲ್ಲಿರುವ ೪ ಎಕರೆ ೧೫ ಗುಂಟೆ ಜಮೀನಿನಲ್ಲಿ ಸುಮಾರು ೨೮೦ ಅನಧಿಕೃತ ಗುಡಿಸಲುಗಳನ್ನು ಹಾಕಿದ್ದರು. ಹಾಕಲು ಪ್ರಯತ್ನಿಸುತ್ತಿದ್ದ ಸರ್ವೆ ನಂ. ೩೦/೧ ನಲ್ಲಿಯ ಜಾಗವನ್ನು ಸಂಬಂಧಪಟ್ಟ ನಿಯೋಜಿತ ಅಧಿಕಾರಿಗಳು (ಕಾಂಪಿಟೆಂಟ್ ಅಥಾರಿಟಿ) ನಗರ ಭೂ ಪರಿಮಿತಿ ಕಾನೂನಿನ ೧೦ (೩)ನೇ ಪ್ರಕರಣದಂತೆ ದಿನಾಂಕ ೧೧-೪-೮೯ರಲ್ಲಿ ಹೆಚ್ಚುವರಿ ಜಾಗವೆಂದು ಆಜ್ಞೆ ಹೊರಡಿಸಿದ್ದಾರೆ. ಆದುದರಿಂದ ಈ ಜಾಗವು ಸರ್ಕಾರದ ಸ್ವತ್ತಾಗಿರುತ್ತದೆ. ಮಂತ್ತು ಸರ್ವೆ ನಂ ೩೧ರಲ್ಲಿರುವ ಜಮೀನು ವ್ಯವಸಾಯದ ಜಮೀನಾಗಿದ್ದು, ಇದು ಖಾಸಗಿಯವರ ಸ್ವತ್ತಾಗಿರುತ್ತದೆ. ಸದರೀ ಅನಧಿಕೃತ ಗುಡಿಸಲುಗಳನ್ನು ತೆಗೆದುಹಾಕಲು ಮಹಾನಗರ ಸಭೆಯ ಸಂಬಂಧಪಟ್ಟ ಅಧಿಕಾರಿಗಳು ಮೌಖಿಕವಾಗಿ ಅನೇಕ ಸಲ ತಿಳಿಸಿದ್ದರೂ ಸಹ ಅವುಗಳನ್ನು ತೆಗೆದಿರಲಿಲ್ಲ. ಈ ಗುಡಿಸಲುಗಳಲ್ಲಿ ವಾಸಿಸುತ್ತಿದ್ದ ಜನರು ತಮ್ಮ ವೈಯಕ್ತಿಕ ವಿಳಾಸಗಳನ್ನು ತಿಳಿಸಲು ಸಿದ್ಧರಿರಲಿಲ್ಲವಾದ್ದರಿಂದ ಮತ್ತು ಆ ನಿವಾಸಿಗಳು ಆಗ ತಾನೆ ಅಂದರೆ ಕೇವಲ ಕೆಲವು ದಿನಗಳು ಮುಂಚೆ ಅನಧಿಕೃತವಾಗಿ ಬಂದುದರಿಂದ ಅವರುಗಳಿಗೆ ವೈಯಕ್ತಿಕ ನೋಟೀಸುಗಳನ್ನು ಕೊಡಲು ಮಹಾನಗರಸಭೆಯ ಅಧಿಕಾರಿಗಳಿಗೆ ಸಾಧ್ಯವಾಗಲಿಲ್ಲ. ಆದರೂ ಕ್ಷೇತ್ರದಲ್ಲಿ ಚೆನ್ನಾಗಿ ಕಾಣುವ ಸ್ಥಳದಲ್ಲಿ ನೋಟೀಸ್ ಅಂಟಿಸಿ ಈ ವಿಷಯದಲ್ಲಿ ಪಂಚನಾಮೆಯನ್ನು ಮಾಡಲಾಯಿತು. ನಂತರ ಮಹಾನಗರಸಭೆಯ, ನಗರ ಯೋಜನೆಯ ಉಪನಿರ್ದೇಶಕರುಗಳು, ನಗರಾಭಿವೃದ್ಧಿ ಮಂಡಳಿಯ ಕಾರ್ಯದರ್ಶಿ, ನಗರಯೋಜನಾ ಪ್ರಾಧಿಕಾರದ ಕಾರ್ಯದರ್ಶಿ ಹಾಗೂ ಕಂದಾಯ ಮತ್ತು ಪೋಲೀಸ್ ಅಧಿಕಾರಿಗಳ ನೇತೃತ್ವದಲ್ಲಿ ದಿನಾಂಕ ೩೦-೧-೧೯೮೭ರಂದು ಈ ಅನಧಿಕೃತವಾಗಿ ಹಾಕಲಾದ ಗುಡಿಸಲುಗಳನ್ನು ತೆಗೆದುಹಾಕಲಾಯಿತು.

ಈಗ ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಯ ಮುಂದೆ, ಬಡವರಿಗಾಗಿ ಸರಕಾರಿ ಜಮೀನನ್ನು ಪರಿವರ್ತಿಸಿ ೭೦೦೦ ನಿವೇಶನಗಳನ್ನು ಹಂಚುವ ಪ್ರಸ್ತಾವವಿದೆ. ಆ ಪ್ರಸ್ತಾವವನ್ನು ಕಾರ್ಯಗತ ಗೊಳಿಸಿ ಬಡವರಿಗಾಗಿ ನಿವೇಶನಗಳನ್ನು ಹಂಚಲು ನಿರ್ಣಯಿಸಿದಲ್ಲಿ, ಈಗ ತೆಗೆದುಹಾಕಿದ ಗುಡಿಸಲುಗಳಲ್ಲಿ ವಾಸಿಸುತ್ತಿದ್ದ ಜನರು ಅರ್ಜಿ ಮಾಡಿದಲ್ಲಿ ಅವರ ಬೇಡಿಕೆಗಳನ್ನು ಪರಿಗಣಿಸಲಾಗುವುದು.

ಶ್ರೀ ಎ. ಎಂ. ಹಿಂಡಸಗೇರಿ.—ಮಾನ್ಯ ಅಧ್ಯಕ್ಷರೆ, ಹುಬ್ಬಳ್ಳಿಯ ಆನಂದ್ ನಗರದ ಹತ್ತಿರ ಸರ್ವೆ ನಂಬರ್ ೩೦-೧ ಮತ್ತು ೩೧ನೇ ಜಾಗದಲ್ಲಿ ೩೦೦ ಗುಡಿಸಲುಗಳನ್ನು ತೆಗೆದುಹಾಕಿದ್ದಾರೆ. ಹುಬ್ಬಳ್ಳಿಯಿಂದ ಐದಾರು ಕಿಲೋಮೀಟರ್ ನಂತರ ಈ ಆನಂದ್‌ನಗರ ಬಡಾವಣೆ ಇದೆ. ಅದು ಕೊಳಚೆ ಪ್ರದೇಶವಾಗಿದೆ. ನಮ್ಮ ರಾಜ್ಯದಲ್ಲಿ ಅಥವಾ ನಮ್ಮ ಜಿಲ್ಲೆಯಲ್ಲಿ ಬರಗಾಲ ಪರಿಸ್ಥಿತಿ ಉಂಟಾದಾಗ ಹೊರಗಿನ ಮಂದಿ ಬಂದು ಸಣ್ಣ ಸಣ್ಣ ಗುಡಿಸಲುಗಳನ್ನು ಅಲ್ಲಿ ಹಾಕಿಕೊಂಡು ವಾಸಿಸುತ್ತಿದ್ದರು. ನೋಟೀಸ್ ಕೊಡಲಾರದೆ ಅಕಸ್ಮಾತ್ತಾಗಿ ಒಂದು ದಿವಸ ಗುಡಿಸಲು ಕಿತ್ತುಹಾಕಿದ್ದಾರೆ. ಹಾಗೂ ತೆಗೆದುಹಾಕಿದ ನಂತರ ಯಾರು ಯಾರು.....